| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3 ಮೊದಲ 40ನಿ KAN 44½** | 20 ನಿ | **ಕನ್ನಡ ಪದ ಓದು ಅಕ್ಷರ ಕಲಿ ಹಂತ – 3** (ಪ, ಯ, ಉ, ಡ, ಟ, ಚ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು. ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | ಮಿಂಚು ಪಟ್ಟಿಗಳು | ಶಿಕ್ಷಕ | ¼ ಅಳತೆಯ ಡ್ರಾಯಿಂಗ್ ಶೀಟ್‌ನಲ್ಲಿ ರಚಿಸಿದ "ಪ,ಯ,ಉ,ಡ,ಟ,ಚ" ಅಕ್ಷರಗಳನ್ನು ಪ್ರತ್ಯೇಕವಾಗಿ ತೋರಿಸಿ ಹೇಳಿಕೊಡುವರು ಮತ್ತು ಮಕ್ಕಳಿಂದ ಹೇಳಿಸುವರು. | **ಕನ್ನಡ ತಂಗಿಗೆ ನಾಮಕರಣ** | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು. * ಮಾರ್ಗದರ್ಶಿತ ಸರಳ ವಿವರಣಾತ್ಮಕ ವಾಕ್ಯ ಬರೆಯುವುದು. | ಹೊಸ ಪದಗಳ ಪಟ್ಟಿ ಕಪ್ಪು ಹಲಗೆ | ಹಿರೇಮಣಿ | **ಕಲಿಕಾ ಚಟುವಟಿಕೆ :** ಮಕ್ಕಳು ಹಿಂದಿನ ತರಗತಿಯಲ್ಲಿ ಹೇಳಿಕೊಟ್ಟ ಪಾಠವನ್ನು ಓದಿಕೊಳ್ಳುವರು. |
| | 20 ನಿ | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮೇಲಿನ ಚಟುವಟಿಕೆಯನ್ನು ಪುನರಾವರ್ತಿಸುವರು. ಮೇಲಿನ ಅಕ್ಷರಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. | | | | ಶಿಕ್ಷಕ | ಮಕ್ಕಳಿಂದ ಪಾಠವನ್ನು ಓದಿಸುವರು. ಮಕ್ಕಳ ತಪ್ಪುಗಳನ್ನು ತಿದ್ದುವರು. ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಪರಿಚಯಿಸುವರು. ನಂತರ ಹೇಳಿಸಿ ಬರೆಸುವರು. (ಹಿಂದಿನ ತರಗತಿಯಲ್ಲಿ ಹೇಳಿಕೊಟ್ಟಿದ್ದ ಪಾಠಕ್ಕೆ ಸಂಬಂಧಿಸಿದಂತೆ) ಪಾಠ ಭಾಗವನ್ನು ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. |
| **3 ನಂತರದ 40ನಿ** | 05 ನಿ | **ಜೀವನ ವಿಜ್ಞಾನ ಪ್ರಾರ್ಥನೆಯ ಅಭ್ಯಾಸ** | * ಸಾಂಘಿಕ ಮನೋಭಾವನೆ ಮತ್ತು ಏಕಾಗ್ರತೆಯ ಭಾವನೆ ಬೆಳೆಸಿಕೊಳ್ಳುವುದು. | ಪ್ರಾರ್ಥನಾ ಗೀತೆ | ಶಿಕ್ಷಕ | ಎಲ್ಲಾ ಮಕ್ಕಳನ್ನು ಒಂದೆಡೆ ಸೇರಿಸಿ, ಕೈ ಜೋಡಿಸಿ ಕಣ್ಣುಮುಚ್ಚಿ ಕುಳಿತುಕೊಳ್ಳುವಂತೆ ಶಿಕ್ಷಕರು ಸೂಚಿಸುವರು. | ಎರಡೂ ತರಗತಿಯ ಮಕ್ಕಳು ಒಟ್ಟಿಗೆ ಚಟುವಟಿಕೆಯಲ್ಲಿ ತೊಡಗುವರು. | | | | |
| | 30 ನಿ | | | | ಶಿಕ್ಷಕ<br>ಶಿಕ್ಷಕ | ನಂತರ ಶಿಕ್ಷಕರು, ಸರಳವಾದ ಯಾವುದಾದರೊಂದು ಪ್ರಾರ್ಥನೆಯನ್ನು ಹೇಳಿಕೊಡುವರು ಮತ್ತು ಮಕ್ಕಳಿಂದ ಹೇಳಿಸುವರು.<br>ಉದಾ : "ಬೆನಕ ಬೆನಕ ಏಕದಂತ<br>ಪಚ್ಚೆಕಲ್ಲು ಪಾಣಿ ಪೀಠ (ಮೆಟ್ಟಿಲು)<br>ಮುತ್ತಿನುಂಡೆ, ಹೊನ್ನಘಂಟೆ,<br>ಒಪ್ಪುವ ವಿಘ್ನೇಶ್ವರ ನಿನಗೆ<br>ಇಪ್ಪತ್ತೊಂದು ನಮಸ್ಕಾರಗಳು"<br>ಶಿಕ್ಷಕರು ಮಕ್ಕಳ ತಪ್ಪು ಉಚ್ಚಾರಣೆಯನ್ನು ಗುರುತಿಸಿ ಸರಿಪಡಿಸುವರು. | | | | | |
| | 05 ನಿ | | | | | ಈಗ ಮಕ್ಕಳಿಂದ ಸ್ವತಂತ್ರ್ಯವಾಗಿ ಪ್ರಾರ್ಥನೆಯನ್ನು ಮಾಡಿಸಿ, ಉತ್ತಮವಾಗಿ ಹಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 ಮೊದಲ 40ನಿ | 10 ನಿ | ಸಾ.ಉ.ಉ.ಕಾರ್ಯ ಚುಕ್ಕಿಗಳನ್ನು / ಅಂಕಿಗಳನ್ನು ಸೇರಿಸಿ ಚಿತ್ರ ರಚಿಸುವುದು. | * ಗೆರೆಗಳಿಂದ ಚುಕ್ಕಿಗಳನ್ನು / ಅಂಕಿಗಳನ್ನು ಕ್ರಮವಾಗಿ ಜೋಡಿಸಿ, ಚಿತ್ರ ಗುರುತಿಸುವ ಸಾಮರ್ಥ್ಯ | ಹಳೆಯ ವಾರಪತ್ರಿಕೆಗಳು ಮಕ್ಕಳ ಪತ್ರಿಕೆಗಳು ಸ್ಕೆಚ್‌ಪೆನ್/ ಪೆನ್ಸಿಲ್ | ಶಿಕ್ಷಕ | ಶಿಕ್ಷಕರು ಪೆನ್ಸಿಲ್ ಅಥವಾ ಸ್ಕೆಚ್‌ಪೆನ್ನಿನ ಸಹಿತವಾಗಿ ಎಲ್ಲಾ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ, ಅವರಿಗೆ ವೃತ್ತಪತ್ರಿಕೆಗಳು ಅಥವಾ ವಾರಪತ್ರಿಕೆ / ಮಕ್ಕಳ ಮಾಸಿಕಗಳಲ್ಲಿ ಬರುವ 'ಚುಕ್ಕೆ ಜೋಡಿಸಿ ಚಿತ್ರ ರಚಿಸು', 'ಅಂಕಿಗಳನ್ನು ಸೇರಿಸುತ್ತಾ, ಚಿತ್ರ ರಚಿಸು', ಮೊದಲಾದವುಗಳನ್ನು ಸಂಗ್ರಹಿಸಿಟ್ಟುಕೊಂಡು ವಿತರಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 20 ನಿ | | | | ಶಿಕ್ಷಕ | ಒಂದನೇ ತರಗತಿಗೆ "ಚುಕ್ಕಿ ಜೋಡಿಸುವ ಚಿತ್ರಗಳು" ಹಾಗೂ 2ನೇ ತರಗತಿಗೆ "ಅಂಕಿ ಜೋಡಿಸಿ ಚಿತ್ರ ಬರಿ", ಮುಂತಾದ ಚಿತ್ರಗಳು ಸಿಗುವಂತೆ ಶಿಕ್ಷಕರು ಗಮನ ವಹಿಸುವರು.<br>ಶಿಕ್ಷಕರು ಎರಡೂ ತರಗತಿಯ ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸುವರು. | | | | | |
| | 10 ನಿ | | | | ಶಿಕ್ಷಕ | ಎಲ್ಲಾ ಮಕ್ಕಳಿಗೂ ತಾವು ರಚಿಸಿರುವ ಚಿತ್ರವನ್ನೂ ಗಮನಿಸಿ, ಅಲ್ಲಿ ಮೂಡಿಬಂದಿರುವ ಚಿತ್ರ ಗುರುತಿಸಿ, ಹೆಸರಿಸುವಂತೆ ಹೇಳಿ, ನಂತರ ಚಿತ್ರದ ಕೆಳಗೆ 2ನೇ ತರಗತಿಯ ಮಕ್ಕಳ ಸಹಾಯದೊಂದಿಗೆ, ಹೆಸರು ಬರೆಯುವಂತೆ ಸೂಚನೆ ನೀಡುವರು. | | | | | |
| 4 ಕೊನೆಯ 40ನಿ | 40 ನಿ | ಮೌಲ್ಯ ಶಿಕ್ಷಣ "ವಿನಯ" | * ಮಕ್ಕಳು ಹಿರಿಯರೊಂದಿಗೆ ಸ್ನೇಹಿತರೊಂದಿಗೆ ಮತ್ತು ಸಮಾಜದ ಇತರ ಸದಸ್ಯರೊಂದಿಗೆ ವಿನಯದಿಂದಿರುವುದನ್ನು ರೂಢಿಸಿಕೊಳ್ಳುವರು. | ಕಥೆಯನ್ನು ಸೂಚಿಸುವ ಚಿತ್ರಪಟಗಳು | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ, ಮಕ್ಕಳಲ್ಲಿ ವಿನಯ ಮತ್ತು ವಿಧೇಯತೆಯನ್ನು ಬೆಳೆಸುವಂತಹ ಕಥೆಗಳನ್ನು ಹೇಳುವುದು ಮತ್ತು ಅದರಲ್ಲಿನ ಉತ್ತಮ ಅಂಶಗಳನ್ನು (ನೀತಿಯನ್ನು) ಮಕ್ಕಳೊಂದಿಗೆ ಸರಳ ಮಾತುಗಳಲ್ಲಿ ಚರ್ಚಿಸುವುದು.<br>ಉದಾ : ಎರಡು ಗಿಳಿಗಳು ಸಹವಾಸದಿಂದಾಗಿ ಬೆಳೆಸಿಕೊಂಡ ಗುಣಗಳನ್ನು ಕುರಿತಾದ ಕಥೆ.<br>"ಒಂದು ಗಿಳಿಯು 2 ಮೊಟ್ಟೆಗಳನ್ನಿಟ್ಟಿತ್ತು ಅದರಿಂದ 2 ಮರಿಗಳು ಹೊರಬಂದವು. ಒಂದು ಮರಿಯನ್ನು ಋಷಿಯೊಬ್ಬನು, ಕೊಂಡೊಯ್ದನು ಇನ್ನೊಂದು ಮರಿಯನ್ನು ಒಬ್ಬ ದರೋಡೆಕೋರನು ಕೊಂಡೊಯ್ದನು........................................"ಕಥೆಯಲ್ಲಿನ ಒಳ್ಳೆಯ ಅಂಶಗಳ ಬಗ್ಗೆ ಸರಳ ಸಂಭಾಷಣೆಯ ಮೂಲಕ ಚರ್ಚಿಸುವುದು. | | | | | ಎರಡೂ ತರಗತಿಯ ಸಾಮರ್ಥ್ಯಗಳು ಮತ್ತು ಮೌಲ್ಯಗಳು ಸಂಪೂರ್ಣ ಸಹ ಸಂಬಂಧ ಹೊಂದಿರುವುದರಿಂದ, ಎರಡನೇ ತರಗತಿಯ ವಿದ್ಯಾರ್ಥಿಗಳು ಒಂದನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಒಟ್ಟಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ಪಾಠದ ಹೆಸರು ಕಲಿಕಾಂಶ | ಸಾಮರ್ಥ್ಯಗಳು | ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಪಾಠದ ಹೆಸರು ಕಲಿಕಾಂಶ | ಸಾಮರ್ಥ್ಯಗಳು | ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN 45 | 10 ನಿ | ನಲಿ ಕಲಿ ಅಕ್ಷರ ಕಲಿ ಹಂತ - 3 ಕನ್ನಡ (ಪ, ಯ, ಉ, ಡ, ಒ, ಣ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒತ್ತಾಗಿ ಮತ್ತು ಬಿಡಿಯಾಗಿ ಗುರುತಿಸುವರು. ಅಕ್ಷರ ಪಟ್ಟ ಅಕ್ಷರಗಳನ್ನು ಓದುವರು. | ಮಿಂಚು ಪಟ್ಟಿಗಳು | ಶಿಕ್ಷಕ | ಎರಡೂ ತರಗತಿಯ ಮಕ್ಕಳಿಗೆ ಹಿಂದಿನ ತರಗತಿಯಲ್ಲಿ ನೀಡಲಾದ ಗೃಹಪಾಠವನ್ನು ಪರಿಶೀಲಿಸುವರು. | ಕನ್ನಡ ತಂಗಿಗೆ ನಾಮಕರಣ | ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವರು. * ಮಾರ್ಗದರ್ಶಿತ ಸರಳ ಉದಾಹರಣೆ ವಾಕ್ಯ ಬರೆಯುವರು. | ಪಠ್ಯ ಪುಸ್ತಕ | ಶಿಕ್ಷಕ | * ತರಗತಿ '1'ರಲ್ಲಿ ಸೂಚಿಸಿರುವಂತೆ ಮಕ್ಕಳು ತೊಡಗುವರು.<br>* ಹಿಂದಿನ ತರಗತಿಯಲ್ಲಿನ ಪಾಠವನ್ನು ಹಿರೇಮಣಿಯು ಓದಿಸಲು ತಿಳಿಸುವರು. |
| | 40 ನಿ | | | ಮಿಂಚು ಪಟ್ಟಿಗಳು | ಶಿಕ್ಷಕ | * ಮಕ್ಕಳನ್ನು ಕಪ್ಪುಹಲಗೆಯ ಮುಂದೆ ಕೂರಿಸಿಕೊಂಡು ಪ, ಯ, ಉ – ಈ ಅಕ್ಷರಗಳನ್ನು ಬರೆಯುವ ಕ್ರಮವನ್ನು ತೋರಿಸಿ ಕೊಡುವರು.<br>* ಪ್ರತಿ ಮಗುವಿನಿಂದ ಒಂದೊಂದೇ ಅಕ್ಷರವನ್ನು ಬರೆಸಿ ಸರಿಯಾದ ಕ್ರಮದಲ್ಲಿ ಬರೆಯುವುದನ್ನು ಖಾತ್ರಿಪಡಿಸಿಕೊಳ್ಳುವರು.<br>* ಎಲ್ಲಾ ಅಕ್ಷರಗಳನ್ನು ವಾಲ್‌ಸ್ಲೇಟಿನಲ್ಲಿ ಅಭ್ಯಾಸ ಮಾಡಲು ತಿಳಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 25 ನಿ | | | | | | | | | | |
| | 05 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ | ಶಿಕ್ಷಕ | * ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಸರಿಯಾಗಿ ಓದಲು ಬಾರದ ಮಕ್ಕಳಿಂದ ಶಿಕ್ಷಕರು ಓದಿಸುವರು. ಮಕ್ಕಳ ತಪ್ಪುಗಳನ್ನು ತಿದ್ದುವರು.<br>* ಪಠ್ಯದ ಪುಟಸಂಖ್ಯೆಯ 30ರಲ್ಲಿ "ಶ್ರೀ ಕಾಂತ ಮಾವ ಎಲ್ಲರೂ.......................................ಜೋಗುಳ ಹಾಡಿದರು". ವರೆಗೆ ಪಾಠವನ್ನು ಓದಿ ಹೇಳಿಕೊಡುವರು.<br>ಹಿರೇಮಣಿಯಿಂದ ಓದಿಸುವರು<br>* ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಮಕ್ಕಳಿಂದ ಓದಿಸುವರು. |
| | | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು.<br>ನೋಟ್ ಪುಸ್ತಕದಲ್ಲಿ "ಪ, ಯ, ಉ" ಈ ಅಕ್ಷರಗಳನ್ನು ನಕಲು ಮಾಡಿಕೊಂಡು ಬರಲು ತಿಳಿಸುವರು. | | | | | * ಕಪ್ಪು ಹಲಗೆಯ ಮೇಲೆ ಬರೆದ ಪದಗಳನ್ನು ನಕಲು ಮಾಡಿಕೊಂಡು ಬರಲು ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 05 ನಿ | ಗಣಿತ ಸಂಕಲನ | * ಮೊತ್ತ 9ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತುಗಳನ್ನು ಬಳಸಿ, ಸಂಕಲನ<br>* ಕೂಡುವ ಚಿಹ್ನೆ ಮತ್ತು ಸಮ ಚಿಹ್ನೆಯ ಪರಿಚಯ ಮತ್ತು ಬಳಕೆ | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯ ಪುಸ್ತಕದಲ್ಲಿನ ಪುಟ – 56–57ನ್ನು ತೆರೆದು ಲೆಕ್ಕಗಳನ್ನು ಮಾಡಲು ಪ್ರಾರಂಭಿಸುವಂತೆ ಸೂಚಿಸುವರು. | ಗಣಿತ ಸಂಕಲನ (ದಶಕ ಸಹಿತ) | * ದಶಕ ವಿರುವಂತೆ ಎರಡು ಮತ್ತು ಮೂರು ಸಂಖ್ಯೆಗಳನ್ನು ಸಂಕಲನ ಮಾಡುವುದು. | ಪಠ್ಯ ಪುಸ್ತಕ ಬಣ್ಣದ ಪೆನ್ಸಿಲ್ (ಕೆಂಪು ಮತ್ತು ಹಳದಿ) | ಶಿಕ್ಷಕ | ಮಕ್ಕಳನ್ನು ಅವರ ಸಂಖ್ಯೆಗೆ ಅನುಗುಣವಾಗಿ ಗುಂಪು ಮಾಡಿ ಕುಳಿತುಕೊಳ್ಳಲು ಹೇಳಿ ಪುಟ 84ರಲ್ಲಿನ ಚಿತ್ರಕ್ಕೆ ಸೂಚನೆಗಳಿಗೆ ಅನುಗುಣವಾಗಿ ಬಣ್ಣ ಹಾಕುವಂತೆ ತಿಳಿಸುವರು. |
| | 30 ನಿ | | | | ಶಿಕ್ಷಕ | ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಬಳಿಗೆ ಹೋಗಿ, ಅವರು ಪಠ್ಯಪುಸ್ತಕದಲ್ಲಿ ನಿರ್ವಹಿಸುತ್ತಿರುವ ಚಟುವಟಿಕೆ (ಪುಟ–56) ಪರೀಕ್ಷಿಸಿ, ಅಗತ್ಯವಿದ್ದಲ್ಲಿ ತಿದ್ದುಪಡಿ ಮಾಡಿ, ಅವಶ್ಯಕವಿದ್ದಲ್ಲಿ ಮತ್ತೊಮ್ಮೆ, ವಸ್ತು ಬಳಸಿ ಅಭ್ಯಾಸ ಮಾಡಿಸಿ, ಲೆಕ್ಕಗಳನ್ನು ಮಾಡಿಸುವುದು. | | | | ಹಿರೇಮಣಿ | ಮಕ್ಕಳು ಪಠ್ಯಪುಸ್ತಕದಲ್ಲಿನ ಚಿತ್ರಕ್ಕೆ ಸೂಚನೆಗೆ ತಕ್ಕಂತೆ ಸಮ ಸಂಖ್ಯೆ ಉತ್ತರ ಬಂದಲ್ಲಿ ಹಳದಿ ಬಣ್ಣ ಹಾಗೂ ಬೆಸ ಸಂಖ್ಯೆ ಉತ್ತರ ಬಂದಿರುವಲ್ಲಿ ಕೆಂಪು ಬಣ್ಣ ಹಾಕುವರು. |
| | 10 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಮಕ್ಕಳ ಅಭ್ಯಾಸವನ್ನು ತಿದ್ದುವರು ಹಾಗೂ ಅದರಂತೆ, ಪುಟ – 57ರಲ್ಲಿ ಇರುವಂತಹ ಅಭ್ಯಾಸ ಚಟುವಟಿಕೆಯನ್ನು ಮಾಡುವಂತೆ ಶಿಕ್ಷಕರು ಸೂಚನೆ ನೀಡುವರು. | | | | ಶಿಕ್ಷಕ | ಶಿಕ್ಷಕರು ಉತ್ತಮ ಚಿತ್ರವನ್ನು ಗುರುತಿಸಿ, ಆ ವಿದ್ಯಾರ್ಥಿಯನ್ನು ಚಪ್ಪಾಳೆಯ ಮೂಲಕ ಪ್ರೋತ್ಸಾಹಿಸುವರು.<br>ನಂತರ ಪಠ್ಯಪುಸ್ತಕದ ಪುಟ–85ರಲ್ಲಿ ಇರುವ ಅಭ್ಯಾಸದ ಲೆಕ್ಕಗಳನ್ನು ಮಾಡುವಂತೆ ಸೂಚನೆ ನೀಡುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ, ಪುಟ–57ರ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ | ಶಿಕ್ಷಕ | ಮೊದಲಿಗೆ ವಿದ್ಯಾರ್ಥಿಗಳು ಪುಟ–85ರಲ್ಲಿನ ಲೆಕ್ಕಗಳನ್ನು ಮಾಡುವರು. ನಂತರ ಶಿಕ್ಷಕರು ಇದೇ ಮಾದರಿಯಲ್ಲಿ ಮೂರು ಸಂಖ್ಯೆಗಳಲ್ಲಿ ಸಂಕಲನ ಮಾಡುವ ವಿಧಾನ ತಿಳಿಸಿ, ಕೆಲವು ಮಾದರಿ ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ವಿದ್ಯಾರ್ಥಿಗಳಿಂದ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಪಠ್ಯಪುಸ್ತಕದ ಪುಟ – 57 ಪರಿಶೀಲಿಸಿ, ತಪ್ಪುಗಳನ್ನು ತಿದ್ದುವರು. | | | | ಶಿಕ್ಷಕ | ಕಪ್ಪು ಹಲಗೆಯ ಮೇಲೆ ಮಕ್ಕಳು ಮಾಡಿರುವ ಲೆಕ್ಕಗಳನ್ನು, ಉತ್ತರಗಳನ್ನು ಪರಿಶೀಲಿಸಿ, ಅವಶ್ಯಕ ತಿದ್ದುಪಡಿ ಮಾಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಸಾ. ಉ. ಉ. ಕಾರ್ಯ<br>ಚಿತ್ರಗಳಿಗೆ ಬಣ್ಣ ತುಂಬಿ ಅವುಗಳ ಆಲ್ಬಮ್ ತಯಾರಿಸುವುದು. | * ಚಿತ್ರಗಳಿಗೆ ಬಣ್ಣ ತುಂಬಿ ಅವುಗಳ ಆಲ್ಬಮ್ ತಯಾರಿಸುವುದು.<br>ಜೋಡಿಸುವ ಸಾಮರ್ಥ್ಯ ಚಿತ್ರಗಳನ್ನು ಸಂಗ್ರಹಿಸಿಟ್ಟು ಆಲ್ಬಮ್ ತಯಾರಿಸುವ ಸಾಮರ್ಥ್ಯ | ಹಳೆಯ ವೃತ್ತಪತ್ರಿಕೆಗಳು | ಶಿಕ್ಷಕ | ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ಸಣ್ಣ ಸಣ್ಣ ಗುಂಪುಗಳಲ್ಲಿ ಕೂರಿಸಿ, ಅವರಿಗೆ ಕತ್ತರಿ ಮತ್ತು ಹಳೆಯ ವೃತ್ತ ಪತ್ರಿಕೆ / ವಾರಪತ್ರಿಕೆಗಳನ್ನು ವಿತರಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಶಿಕ್ಷಕ | ನಂತರ ಶಿಕ್ಷಕರು ಮಕ್ಕಳಿಗೆ ಪತ್ರಿಕೆಗಳಲ್ಲಿರುವ ರೇಖಾಚಿತ್ರ ಅಥವಾ ವಿವಿಧ ಸನ್ನಿವೇಶಗಳ ಕಪ್ಪು-ಬಿಳುಪು ಚಿತ್ರಗಳನ್ನು ಗುರುತಿಸಿ, ಅವುಗಳನ್ನು ಕತ್ತರಿಸಿಟ್ಟುಕೊಳ್ಳುವಂತೆ ಸೂಚನೆ ನೀಡುವರು.<br>ಶಿಕ್ಷಕರ ಸಲಹೆ ಪಡೆಯುತ್ತಾ ಸೂಕ್ತ ಚಿತ್ರಗಳನ್ನು ಕತ್ತರಿಸಿ ಇಟ್ಟುಕೊಳ್ಳುವರು. | | | | | |
| | 30 ನಿ | | | ಬಣ್ಣದ ಪೆನ್ಸಿಲ್‌ಗಳು | ಶಿಕ್ಷಕ | ಗುಂಪುಗಳಲ್ಲಿ ಕುಳಿತ ಮಕ್ಕಳು ಕತ್ತರಿಸಿದ ಚಿತ್ರಗಳನ್ನು ತಮ್ಮಲ್ಲಿ ಹಂಚಿಕೊಂಡು, ಅವುಗಳಿಗೆ ಸೂಕ್ತ ಬಣ್ಣಗಳನ್ನು ಹಾಕುವರು. | | | | | |
| | 10 ನಿ | | | | ಶಿಕ್ಷಕ | ಬಣ್ಣ ಹಚ್ಚಿದ ಚಿತ್ರಗಳನ್ನು ಒಂದು ಹಳೆಯ ಪುಸ್ತಕದ ಹಾಳೆಗಳ ನಡುವೆ, ಜೋಪಾನವಾಗಿ ತೆಗೆದಿಟ್ಟು ಮುಂದಿನ ತರಗತಿಗೆ ಅಣಿಗೊಳ್ಳುವಂತೆ ಶಿಕ್ಷಕರು ಮಕ್ಕಳಿಗೆ ಸೂಚಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4**<br>ಪ. ಅ<br>28 | 40 ನಿ | ಪರಿಸರ ಅಧ್ಯಯನ<br>ನಮ್ಮ ಆಹಾರ | ಆರೋಗ್ಯವನ್ನು ಕಾಪಾಡಲು ಆಹಾರದ ಅವಶ್ಯಕತೆ ಗ್ರಹಿಸುವರು | ಪ್ರಾಣಿಗಳು<br>ಪಕ್ಷಿಗಳು<br>ವಿವಿಧ ಗಾತ್ರದ<br>ಚಿತ್ರ ಪಟಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>* ಆಹಾರ ಸೇವಿಸುತ್ತಿರುವ ಪ್ರಾಣಿಗಳು, ಪಕ್ಷಿಗಳು, ವಿವಿಧ ವಯೋಮಾನದ ವ್ಯಕ್ತಿಗಳು ಇರುವಂತಹ ಚಿತ್ರಗಳನ್ನು ತೋರಿಸಿ ಯಾವ ಪ್ರಾಣಿ / ಪಕ್ಷಿ / ವ್ಯಕ್ತಿಯನ್ನು ಆಹಾರ ಸೇವಿಸುತ್ತಿದೆ / ಸೇವಿಸುತ್ತಾನೆ ಎಂದು ಪ್ರಶ್ನಿಸಿ ಉತ್ತರ ಪಡೆಯುವರು.<br>* ಮೇಲಿನ ಚಿತ್ರಗಳನ್ನು ತೋರಿಸುತ್ತಾ ಅವು ಆಹಾರವನ್ನು ಏಕೆ ಸೇವಿಸುತ್ತಿವೆ. ಎಂದು ಪ್ರಶ್ನಿಸಿ ಎಲ್ಲರಿಗೂ ಆಹಾರ ಬೇಕು ಎಂಬುದನ್ನು ಮನವರಿಕೆ ಮಾಡಿಕೊಡುವರು.<br>* – ಒಟ್ಟಾರೆ ಬದುಕಲು ಆಹಾರಬೇಕು.<br>– ಬೆಳವಣಿಗೆಗೆ ಆಹಾರ ಬೇಕು.<br>– ಕೆಲಸ ಮಾಡಲು ಆಹಾರ ಬೇಕು ಎಂಬ ಅಂಶಗಳನ್ನು ಮನದಟ್ಟು ಮಾಡುವರು. | ಪರಿಸರ ಅಧ್ಯಯನ<br>ಆಹಾರ ಏಕೆ ಬೇಕು ? | * ಆಹಾರದಲ್ಲಿ ವೈವಿಧ್ಯತೆ * ಆಟಕ್ಕಾಗಿ ಕೆಲಸಕ್ಕಾಗಿ ಆಹಾರದ ಅವಶ್ಯಕತೆ ಇದೆ. | ವಿವಿಧ<br>ಆಕಾರದ<br>ಗಾತ್ರದ<br>ಪ್ರಾಣಿ, ಪಕ್ಷಿಗಳ<br>ಚಿತ್ರಪಟಗಳು | | **ಕಲಿಕಾಂಶ ಚಟುವಟಿಕೆ :**<br>ಒಂದನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | | | | | 2ನೇ ತರಗತಿಯ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕ | * ವಿವಿಧ ವೃತ್ತಿ / ಕೆಲಸ/ಚಟುವಟಿಕೆ ಮಾಡುತ್ತಿರುವ ವ್ಯಕ್ತಿಗಳ ಚಿತ್ರಗಳನ್ನು ತೋರಿಸುತ್ತಾ ಪ್ರಶ್ನಿಸುವುದು.<br>ಉದಾ : ಜನರು ಏನೇನು ಕೆಲಸ ಮಾಡುತ್ತಿದ್ದಾರೆ ?<br>– ಶಕ್ತಿಪಡೆಯಲು ಏನು ಬೇಕು ?<br>– ನೀನು ಪ್ರತಿ ದಿನ ಏನೇನು ತಿನ್ನುವೆ ಇತ್ಯಾದಿ.<br>– ಒಟ್ಟಾರೆ ಕೆಲಸ ಮಾಡಲು ಶಕ್ತಿಬೇಕು. ಮನುಷ್ಯರು ಮತ್ತು ಪ್ರಾಣಿಗಳು ಬೇರೆ ಬೇರೆಯ ಆಹಾರ ಸೇವಿಸುತ್ತವೆ. ಎಂಬುದನ್ನು ಮನವರಿಕೆ ಮಾಡಿಕೊಳ್ಳುವರು. |
| | | | | | | | | | | ಶಿಕ್ಷಕ | * ನೀನು ತಿನ್ನುವ ಆಹಾರದಲ್ಲಿ ಯಾವ ಯಾವ ತರಕಾರಿಗಳನ್ನು / ಧಾನ್ಯಗಳನ್ನು ಬಳಸುವೆ ? ಎಂಬುದನ್ನು ಪಟ್ಟಿ ಮಾಡಿಕೊಂಡು ಬರಲು ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ 40ನಿ | 40 ನಿ | ದೈ. ಶಿಕ್ಷಣ | ಮಕ್ಕಳು ಸಾಮೂಹಿಕ ಕವಾಯಿತಿನಲ್ಲಿ ಭಾಗವಹಿಸುವರು................ | | | | | | | | |
| 2 KAN 46½ | 10 ನಿ | ಕನ್ನಡ<br>ಪದ ಓದು ಅಕ್ಷರ ಕಲಿ ಹಂತ – 3 (ಪ, ಯ, ಉ, ಡ, ಟ, ಚ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು.<br>* ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | | ಶಿಕ್ಷಕ | ಎರಡೂ ತರಗತಿಯ ಮಕ್ಕಳಿಗೆ ಹಿಂದಿನ ತರಗತಿಯಲ್ಲಿ ನೀಡಲಾದ ಗೃಹ ಪಾಠವನ್ನು ಪರಿಶೀಲಿಸುವರು. | ಕನ್ನಡ<br>'ತಂಗಿಗೆ ನಾಮಕರಣ' | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.<br>* ಮಾರ್ಗದರ್ಶಿತ ಸರಳ ವಿತರಣಾತ್ಮಕ ವಾಕ್ಯ ಬರೆಯುವುದು. | ಪರಿಚಿತ ಸನ್ನಿವೇಶಗಳ ಸಂಭಾಷಣೆಗಳ ಧ್ವನಿಸುರುಳಿ | ಶಿಕ್ಷಕ | 1ನೇ ತರಗತಿಯಲ್ಲಿನ ಚಟುವಟಿಕೆ ಎರಡನೇ ತರಗತಿಗೂ ಪಾಲಿಸುವರು . |
| | 40 ನಿ | | | | ಶಿಕ್ಷಕ | * ಮಕ್ಕಳು ವಾಲ್ ಸ್ಲೇಟಿನಲ್ಲಿ ಹಿಂದಿನ ತರಗತಿಯಲ್ಲಿ ಕಲಿತ ಅಕ್ಷರಗಳನ್ನು ಬರೆದು ಅಭ್ಯಾಸ ಮಾಡಲು ತಿಳಿಸುವರು. | | | | ಶಿಕ್ಷಕ | ಮಕ್ಕಳಿಂದ ಹಿಂದಿನ ತರಗತಿಯಲ್ಲಿ ಹೇಳಿಕೊಟ್ಟ ಪಾಠ ಓದಿಸುವರು. ಪಾಠಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>* ಪುಟ ಸಂಖ್ಯೆ 31ರಲ್ಲಿ "ಜೋ. ಜೋ. ಈ.......... ಅತಿಥಿ ಸತ್ಕಾರ ಮಾಡು" ವರೆಗೆ ಪಾಠವನ್ನು ಹೇಳಿಕೊಟ್ಟು ಓದಿಸುವರು.<br>* ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಸಿ ಓದಿಸುವರು.<br>* ಒಂದೆರೆಡು ಮಕ್ಕಳಿಂದ ಪಾಠ ಓದಿಸಿ ತಪ್ಪುಗಳನ್ನು ತಿದ್ದುವರು.<br>* ಇಡೀ ಪಾಠಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. |
| | | | | | ಸ್ವಕಲಿಕೆ | * ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. | | | | | |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕ | ಮೇಲೆ ಹೇಳಲಾದ ಪಾಠ ಭಾಗವನ್ನು ನಕಲು ಮಾಡಲು ತಿಳಿಸುವರು. |
| | 25 ನಿ | | | ಕಪ್ಪು ಹಲಗೆ ವಾಲ್‌ಸ್ಲೇಟ್ | ಶಿಕ್ಷಕ | ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು 'ಡ' ಮತ್ತು 'ಚ' ಅಕ್ಷರಗಳನ್ನು ಬರೆಯುವ ಕ್ರಮವನ್ನು ತೋರಿಸಿಕೊಡುವರು.<br>* ಮಕ್ಕಳಿಂದ ಕಪ್ಪು ಹಲಗೆಯ ಮೇಲೆ ಬರೆಸಿ ಸರಿಯಾದ ಕ್ರಮವನ್ನು ದೃಢಪಡಿಸುವರು.<br>* ಮಕ್ಕಳು ನೋಟ್ ಪುಸ್ತಕದಲ್ಲಿ ನಕಲು ಮಾಡಲು ತಿಳಿಸುವರು ಮತ್ತು ಗಮನಿಸಿ ಅಗತ್ಯ ಮಾರ್ಗದರ್ಶನ ಮಾಡುವರು. | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>* ಪಾಠವನ್ನು ಮನೆಯಲ್ಲಿ ಓದಿಕೊಂಡು ಬರುವಂತೆ' ಹಾಗೂ ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಸಾ. ಉ. ಉ. ಕಾರ್ಯ<br>ಚಿತ್ರಗಳಿಗೆ ಬಣ್ಣ ತುಂಬಿ ಅವುಗಳ ಆಲ್ಬಮ್ ತಯಾರಿಸುವುದು | * ಆಲ್ಬಮ್‌ಗಳನ್ನು ತಯಾರಿಸುವ ಸಾಮರ್ಥ್ಯಗಳಿಸುವರು. | ಡ್ರಾಯಿಂಗ್ ಹಾಳೆಗಳು | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ, ತಾವು ಹಿಂದಿನ ದಿನ ಕತ್ತರಿಸಿ ಪುಸ್ತಕದೊಳಗೆ ತೆಗೆದಿಟ್ಟುಕೊಂಡ ಚಿತ್ರಗಳ ಸಹಿತ ಚಿಕ್ಕ-ಚಿಕ್ಕ ಗುಂಪುಗಳನ್ನು ಮಾಡಿ ಕೂರಿಸುವರು.<br>ಮಕ್ಕಳ ಪ್ರತಿ ಗುಂಪಿಗೆ ಒಂದರಂತೆ ½ ಸೈಜಿನ ಡ್ರಾಯಿಂಗ್ ಹಾಳೆಗಳು ಹಾಗೂ ಸ್ಕೆಚ್‌ಪೆನ್‌ಗನ್ನು ವಿತರಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | ಸ್ಕೇಲ್<br>ಸ್ಕೆಚ್‌ಪೆನ್<br>ಗೋಂದು<br>(Gum) | ಶಿಕ್ಷಕ | 2ನೇ ತರಗತಿಯ ಮಕ್ಕಳಿಗೆ ಇತರೆ ಮಕ್ಕಳ ಸಹಕಾರ ಪಡೆದು, ಕೊಟ್ಟ ಡ್ರಾಯಿಂಗ್ ಹಾಳೆಗಳಿಗೆ ಚೌಕಟ್ಟು ಗೆರೆಗಳನ್ನು ಹಾಕುವಂತೆ ಶಿಕ್ಷಕರು ಸೂಚನೆ ನೀಡುವರು.<br>ನಂತರ ತಾವು ಬಣ್ಣ ಹಾಕಿದ ಚಿತ್ರಗಳನ್ನು ಸೂಕ್ತ ವಿನ್ಯಾಸದಲ್ಲಿ ಜೋಡಿಸಿ, ಡ್ರಾಯಿಂಗ್ ಹಾಳೆಗಳ ಮೇಲೆ ಇಟ್ಟುಕೊಳ್ಳಲು ತಿಳಿಸುವರು. | | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು ಪ್ರತಿ ಗುಂಪಿನಲ್ಲಿ ಚಿತ್ರಗಳನ್ನು ಜೋಡಿಸಿದ ವಿನ್ಯಾಸವನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿ, ನಂತರ ಚಿತ್ರಗಳನ್ನು ಅಂಟಿಸುವಂತೆ, ಮಕ್ಕಳಿಗೆ ಸೂಚನೆ ನೀಡುವರು. | | | | | |
| | 20 ನಿ | | | | ಶಿಕ್ಷಕ | ನಂತರ ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸಿ, ಎಲ್ಲಾ ಗುಂಪುಗಳ ಡ್ರಾಯಿಂಗ್ ಹಾಳೆಗಳನ್ನು ಸಂಗ್ರಹಿಸಿ, ಅವುಗಳ ಹೊಲಿದ ಆಲ್ಬಮ್ ತಯಾರಿಸಲು ಶಿಕ್ಷಕರು ಸಹಕರಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1**<br>**KAN 47½** | 05 ನಿ | **ಕನ್ನಡ**<br>**ಪದ ಓದು ಅಕ್ಷರ ಕಲಿ : ಹಂತ – 3 (ಪ, ಯ, ಉ, ಡ, ಟ, ಚ)** | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು.<br>* ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | ಮಿಂಚು ಪಟ್ಟಿಗಳು<br>ಪಠ್ಯ ಪುಸ್ತಕ<br>ವಾಲ್‌ಸ್ಲೇಟ್<br><br>ವಾಲ್‌ಸ್ಲೇಟ್/ ಪಠ್ಯಪುಸ್ತಕ | ಶಿಕ್ಷಕ | ಹಿಂದಿನ ತರಗತಿಯ ಗೃಹಪಾಠವನ್ನು ಪರಿಶೀಲಿಸುವರು. | **ಕನ್ನಡ**<br>**ತಂಗಿಗೆ ನಾಮಕರಣ** | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.<br>* ಮಾರ್ಗದರ್ಶಿತ ಸರಳ ವಿವರಣಾತ್ಮಕ ವಾಕ್ಯ ಬರೆಯುವುದು. | ಪಠ್ಯ ಪುಸ್ತಕ | ಶಿಕ್ಷಕ | 1ನೇ ತರಗತಿಯಲ್ಲಿ ಚಟುವಟಿಕೆ ಅನ್ವಯಿಸುತ್ತಾರೆ. |
| | 35 ನಿ | | | | ಶಿಕ್ಷಕ | ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಹಂತ – 3ರ ಅಕ್ಷರಗಳು ಮಿಂಚುಪಟ್ಟಿಗಳನ್ನು ಕೊಟ್ಟು ಓದಿಸುವರು.<br>* ಶಿಕ್ಷಕರು ಹೇಳಿದ ಅಕ್ಷರದ ಮಿಂಚುಪಟ್ಟಿಯನ್ನು ಮಕ್ಕಳು ಗುರುತಿಸಿ ತೋರಿಸುವರು.<br>* ಅಕ್ಷರಗಳನ್ನು ಬಳಸಿ ಎರಡು / ಮೂರು ಅಕ್ಷರದ ಪದ ರಚನೆ ಮಾಡಿಸುವರು.<br>* ಶಿಕ್ಷಕರು ಹೇಳಿದ ಅಕ್ಷರವನ್ನು ಮಕ್ಕಳು ವಾಲ್‌ಸ್ಲೇಟಿನಲ್ಲಿ ಬರೆಯುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಪೂರ್ಣ ಪಾಠವನ್ನು ಓದುವರು. ಹಿರೇಮಣಿ ಓದಿಸುವರು. ಮಕ್ಕಳು ಸರಿದಿಯಂತೆ ಓದುವರು. |
| | 35 ನಿ | | | | ಸ್ವಕಲಿಕೆ | ಮಿಂಚುಪಟ್ಟಿಗಳನ್ನು ಬಳಸಿ ರಚಿಸಿದ ಪದಗಳನ್ನು ವಾಲ್‌ಸ್ಲೇಟಿನಲ್ಲಿ ಐದೈದು / ಹತ್ತು ಬಾರಿ ನಕಲು ಮಾಡಲು ತಿಳಿಸುವರು. | | | ಪಠ್ಯ ಪುಸ್ತಕ | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. |
| | | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | * ಪೂರ್ಣಪಾಠವನ್ನು ಆದ್ಯತೆಯನುಸಾರ ಪ್ರತಿ ಮಕ್ಕಳಿಂದ ಒಂದೆರಡು ಸಾಲುಗಳಂತೆ ಓದಿಸುವುದು.<br>* ಪಾಠಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಾಕ್ಯಗಳನ್ನು ಬರೆದು ಓದಿಸುವರು.<br>* ಮಕ್ಕಳ ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿವಿಧ ಸಂದರ್ಭಗಳನ್ನು ಕುರಿತು ಸರಳ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಸಂಬಂಧಿಸಿದಂತೆ ಹಲವು ವಾಕ್ಯಗಳ ಉತ್ತರ ಪಡೆಯುವುದು. ಉದಾ : ಮದುವೆಯ ಸಂದರ್ಭದಲ್ಲಿ ನಡೆಯುವ ಕಾರ್ಯಕ್ರಮಗಳು ಅಥವಾ ಸಾಮೂಹಿಕ ಭೋಜನದ ಸಂದರ್ಭದಲ್ಲಿ ಮಕ್ಕಳು ಮಾಡುವ ಕೆಲಸಗಳು ಇತ್ಯಾದಿ. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. ಮೇಲೆ ತಿಳಿಸಿರುವ ಮಿಂಚುಪಟ್ಟಿಗಳಲ್ಲಿನ ಅಕ್ಷರಗಳನ್ನು ಬರೆದುಕೊಂಡು ಬರುವಂತೆ ತಿಳಿಸುವರು. | | | | ಶಿಕ್ಷಕ | ತಂಗಿಗೆ ನಾಮಕರಣದ ಒಂದು ಪ್ಯಾರ ಪಾಠವನ್ನು ನಕಲು ಮಾಡಿಕೊಂಡು ಬರಲು ತಿಳಿಸುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| [illegible] | [illegible] | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 10 ನಿ | ಗಣಿತ ಸಂಕಲನ | * ಮಕ್ಕಳಿಗೆ ಕೂಡುವ ಚಿಹ್ನೆ '+' ಮತ್ತು '=' ಸಮಚಿಹ್ನೆಯನ್ನು ಪರಿಚಯಿಸಿ ಅಭ್ಯಾಸ ಮಾಡಿಸುವುದು | ಬೀಜಗಳು<br>ಗೋಲಿಗಳು<br>ಮಣಿಗಳು | ಶಿಕ್ಷಕ | ಪ್ರತಿ ಮಗುವಿಗೆ ತನ್ನ ಕೈಯಲ್ಲಿ 9ಕ್ಕೆ ಮೀರದಂತೆ ಸಂಖ್ಯೆ ಬರೆದುಕೊಳ್ಳಲು ಹೇಳುವರು. | ಗಣಿತ ದಶಕ (ಸ್ಥಿತ ಸಂಕಲನ) | * ದಶಕ ಎರಡಂಕಿ ಎರಡು ಮತ್ತು ಮೂರು ಅಂಕಿ ಸಂಖ್ಯೆಗಳ ಸಂಕಲನ | | ಶಿಕ್ಷಕ | ಶಿಕ್ಷಕರು ಪುಟ–87 ರಲ್ಲಿರುವ ಮೂರು ಸಂಖ್ಯೆಗಳ ಸಂಕಲನ ಮಾಡುವ ಲೆಕ್ಕಗಳನ್ನು ಮೊದಲು ಪಠ್ಯಪುಸ್ತಕದಲ್ಲಿ ನಂತರ ಅಭ್ಯಾಸ ಪುಸ್ತಕದಲ್ಲಿ ಬರೆದುಕೊಳ್ಳುವಂತೆ ಸೂಚಿಸುವರು. |
| | 25 ನಿ | | | ಬೇಳೆಗಳು<br>ಕಲ್ಲುಗಳು<br>ಸೀಮೆಸುಣ್ಣ | ಶಿಕ್ಷಕ | ಒಂದೇ ಅಂಕಿಯನ್ನು ಬರೆದುಕೊಂಡ ವಿದ್ಯಾರ್ಥಿಗಳನ್ನು ಗುರುತಿಸಿ "ಇವರು ಬರೆದುಕೊಂಡ ಸಂಖ್ಯೆಗಳು ಸಮ ಎನ್ನುವರು" ಎಂದು ವಿವರಿಸಿ, ವಿವಿಧ ವಸ್ತು ಮಣಿ/ಗೋಲಿಗಳನ್ನು ಬಳಸಿ ಸಮ ಎಂಬುದನ್ನು ಪರಿಚಯಿಸುವುದು. ನಂತರ ಎರಡು ಸಮ ವಸ್ತುಗಳನ್ನು ಗುರುತಿಸುವಾಗ ಸಮ ಚಿಹ್ನೆಯನ್ನು ಬಳಸುವರು ಎಂದು ವಿವರಿಸಿ, ಅದನ್ನು ಬರೆಯುವ ವಿಧಾನವನ್ನು ತಿಳಿಸುವರು.<br>ನಂತರ ಎಲ್ಲಾ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ, ಅವರೆದುರಿಗೆ '=' ಸಮಚಿಹ್ನೆ ಬರೆದು ಅದನ್ನು ಬೆರಳಿನಿಂದ ತಿದ್ದುವಂತೆ ಸೂಚನೆ ನೀಡುವರು.<br>ಮಕ್ಕಳು ಬೆರಳಿನಿಂದ ತಿದ್ದುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಪುಟ–87ರಲ್ಲಿನ ಚಟುವಟಿಕೆಯಲ್ಲಿ ತೊಡಗುವರು. |
| | 10 ನಿ | | | | ಶಿಕ್ಷಕ | ಈಗ ಮಕ್ಕಳಿಗೆ ತಮ್ಮೆದುರಿಗೆ ಇರುವ ಸಮಚಿಹ್ನೆಯ ಮೇಲೆ ಬೇಳೆ / ಕಲ್ಲುಗಳನ್ನು ಜೋಡಿಸುವಂತೆ ಸೂಚನೆ ನೀಡುವರು. | | | ಸಂಖ್ಯೆಗಳ ಮಿಂಚುಪಟ್ಟಿಗಳು | ಶಿಕ್ಷಕ | ಮಕ್ಕಳು ಮಾಡಿರುವ ಲೆಕ್ಕಗಳ ಉತ್ತರಗಳನ್ನು ಪರಿಶೀಲಿಸಿ, ಅವಶ್ಯಕವಿದ್ದಲ್ಲಿ ತಿದ್ದುಪಡಿ ಮಾಡಿ ಮಾರ್ಗದರ್ಶನ ನೀಡುವರು. |
| | 25 ನಿ | | | | ಸ್ವಕಲಿಕೆ | ಮಕ್ಕಳು ಸಮಚಿಹ್ನೆಯ ಮೇಲೆ, ಬೇಳೆ / ಸಣ್ಣಕಲ್ಲುಗಳನ್ನು ಜೋಡಿಸುವರು. ಮತ್ತು ನೆಲದ ಮೇಲೆ ಸಮಚಿಹ್ನೆಯನ್ನು ಬಳಪದಿಂದ ಬರೆಯುವಂತೆ ಸೂಚಿಸುವರು. | | | | ಶಿಕ್ಷಕ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂರಿಸಿ ಅವರುಗಳಿಗೆ, ಮಿಂಚುಪಟ್ಟಿಗಳನ್ನು ನೀಡಿ ಮೊತ್ತ, 99ನ್ನು ಮೀರದಂತೆ ಪುಟ–88ರಲ್ಲಿನ ಆಟವನ್ನು ಆಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ವೀಕ್ಷಿಸಿ ಉತ್ತಮವಾಗಿ ಜೋಡಿಸಿದ ಮಕ್ಕಳಿಗೆ ಚಪ್ಪಾಳೆಯ ಮೂಲಕ ಪ್ರೋತ್ಸಾಹ ನೀಡುವರು. | | | | ಶಿಕ್ಷಕ | ಮಕ್ಕಳಲ್ಲಿ ಗೆದ್ದ ಮಕ್ಕಳಿಗೆ ಚಪ್ಪಾಳೆಯ ಮೂಲಕ ಪ್ರೋತ್ಸಾಹ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 20 ನಿ | ಜೀವನ ವಿಜ್ಞಾನ (ಆರೋಗ್ಯ ಶಿಕ್ಷಣ) "ಊಟ ಮಾಡುವಾಗ ಅನುಸರಿಸಬೇಕಾದ ಅಂಶಗಳು" | * ಊಟ ಮಾಡುವ ಪರಿಸರದ ಸ್ವಚ್ಛತೆ ಹಾಗೂ ಊಟ ಮಾಡುವ ರೀತಿಯ ಅಭ್ಯಾಸಗಳನ್ನು ಅನುಸರಿಸುವರು. | | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಶಿಕ್ಷಕರು ಒಂದೆಡೆಗೆ ಕೂರಿಸಿಕೊಳ್ಳುವರು, ಕುಳಿತುಕೊಳ್ಳುವ ಹಾಗೂ ನಿಂತುಕೊಳ್ಳುವ ಸರಿಯಾದ ಭಂಗಿಗಳನ್ನು ಒಮ್ಮೆ ಪುನರಾವರ್ತನೆ ಮಾಡಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 50 ನಿ | | | ಸರಿಯಾಗಿ ನಿಲ್ಲುವ, ಕುಳಿತುಕೊಳ್ಳುವ ಭಂಗಿಗಳ ಚಿತ್ರಪಟಗಳು | ಶಿಕ್ಷಕ | ಈಗ ಶಿಕ್ಷಕರು, ಊಟ ಮಾಡುವಾಗ ಕುಳಿತುಕೊಳ್ಳುವ ಭಂಗಿ, ಗಮನಿಸಬೇಕಾದ ಅಂಶಗಳ ಬಗ್ಗೆ ಶಿಕ್ಷಕರು, ಪ್ರಾತ್ಯಕ್ಷಿಕೆಗಳನ್ನು ತೋರಿಸುತ್ತಾ ವಿವರಿಸುವರು.<br>ಉದಾ : 1) ಊಟಕ್ಕೆ ಮೊದಲು ಕೈಕಾಲು ಚೆನ್ನಾಗಿ ತೊಳೆಯಬೇಕು.<br>2) ಊಟಕ್ಕೆ ಮೊದಲು ½ ಲೋಟ ನೀರು ಕುಡಿಯಬೇಕು.<br>3) ಊಟ ಮಾಡುವ ತಟ್ಟೆ ಸ್ವಚ್ಛವಾಗಿದೆಯೇ ಎಂದು ಪರೀಕ್ಷಿಸಬೇಕು.<br>4) ಊಟದ ನಂತರ ಚೆನ್ನಾಗಿ ನೀರು ಕುಡಿಯಬೇಕು.<br>5) ಆಹಾರವನ್ನು ಚೆನ್ನಾಗಿ ಅಗಿದು ನುಂಗಬೇಕು. | | | | | |
| | 10 ನಿ | | | | ಶಿಕ್ಷಕ | ಕೆಲವು ಆಯ್ದ ಮಕ್ಕಳಿಂದ ಮೇಲಿನ ಅಂಶಗಳನ್ನು ಮತ್ತೊಮ್ಮೆ ತಮ್ಮ ಮಾತುಗಳಲ್ಲಿ ಹೇಳಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಪಾಠದ ಹೆಸರು / ಘಟಕ | ಕಲಿಕಾ ಉದ್ದೇಶ | ಬೋಧನೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ಪಾಠದ ಹೆಸರು / ಘಟಕ | ಕಲಿಕಾ ಉದ್ದೇಶ | ಬೋಧನೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>ಪ.ಅ<br>29 | 40 ನಿ | ಪರಿಸರ ಅಧ್ಯಯನ<br>ನನ್ನ ಆಹಾರ | ಆರೋಗ್ಯವನ್ನು ಕಾಪಾಡಲು ಆಹಾರದ ಅವಶ್ಯಕತೆ ಗ್ರಹಿಸುವರು. | ತರಕಾರಿ ಹಣ್ಣುಗಳ ಚಿತ್ರಪಟಗಳು | ಶಿಕ್ಷಕರು | 1 ಮತ್ತು 2ನೇ ತರಗತಿಯ ಮಕ್ಕಳನ್ನು ಒಟ್ಟಿಗೆ ವೃತ್ತಾಕಾರವಾಗಿ ನಿಲ್ಲಿಸಿಕೊಂಡು ಒಂದು ಅಭಿನಯ ಗೀತೆಯನ್ನು ಹೇಳಿಕೊಡುವರು.<br>* ವಿವಿಧ ಆಹಾರ / ಹಣ್ಣು / ತರಕಾರಿ ಇವುಗಳ ಪ್ರತ್ಯೇಕ ಚಿತ್ರ ತೋರಿಸಿ ಇದರಲ್ಲಿ ಮಕ್ಕಳು ಯಾವ ಆಹಾರ / ಹಣ್ಣು / ತರಕಾರಿ ಸೇವಿಸುತ್ತಾರೆ ಎಂಬುದನ್ನು ವೈಯಕ್ತಿಕವಾಗಿ ಹೇಳಿಸುವರು.<br>* ಮಕ್ಕಳು ಸೇವಿಸುವ ತರಕಾರಿ / ಹಣ್ಣು /ಆಹಾರ ವಸ್ತುಗಳ ಪಟ್ಟಿ ಮಾಡಿಸುವುದು. ಒಟ್ಟಾರೆ ವಿವಿಧ ರೀತಿಯ ಆಹಾರ ವಸ್ತುಗಳನ್ನು ನಾವು ತಿನ್ನುತ್ತೇವೆ ಎಂಬುದನ್ನು ಮನದಟ್ಟು ಮಾಡಿಸುವರು. | ಪರಿಸರ ಅಧ್ಯಯನ<br>ಆಹಾರ ಏಕೆ ಬೇಕು ? | * ಆಹಾರದಲ್ಲಿ ವೈವಿಧ್ಯತೆ * ಆಟಕ್ಕಾಗಿ ಕೆಲಸಕ್ಕಾಗಿ ಆಹಾರದ ಅವಶ್ಯಕತೆಯ ಬಗ್ಗೆ ತಿಳಿಯುವರು. | | | ಮಕ್ಕಳು ಒಂದನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 40 ನಿ | | | | | ಮಕ್ಕಳು ಎರಡನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | ಹಸಿಯಾಗಿ ತಿನ್ನುವ ತರಕಾರಿಗಳ ಚಿತ್ರ, ಬೇಯಿಸಿ ತಿನ್ನುವ ತರಕಾರಿ ಚಿತ್ರಗಳು | ಶಿಕ್ಷಕ | ಬೇಯಿಸಿ ತಿನ್ನುವ ತರಕಾರಿಗಳು, ಹಸಿಯಾಗಿಯೇ ತಿನ್ನುವ ತರಕಾರಿಗಳು ನಾವು ತಿನ್ನುವ ಆಹಾರ ಹೇಗಿರಬೇಕು? ನಾವು ತಿನ್ನುವ ಆಹಾರದಲ್ಲಿ ಯಾವ ಯಾವ ಪದಾರ್ಥಗಳು ಇರಬೇಕು? ಎಂಬುದನ್ನು ಪ್ರಶ್ನೆಗಳ ಮೂಲಕ ಗುಂಪಿನಲ್ಲಿ ಅಥವ ವೈಯಕ್ತಿಕವಾಗಿ ಪ್ರಶ್ನಿಸಿ ಉತ್ತರ ಪಡೆಯುವರು.<br>ಪಟ ಸಂಖ್ಯೆ 35ರ ಚಟುವಟಿಕೆಯನ್ನು ಗೃಹಪಾಠವಾಗಿ ನೀಡುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1 KAN 48½** | 05 ನಿ | **ಕನ್ನಡ**<br>**ಪದ ಓದು ಅಕ್ಷರ ಕಲಿ : ಹಂತ – 3 (ಪ, ಯ, ಉ, ಡ, ಟ, ಚ)** | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು.<br>* ಅಚ್ಚಾದ ಅಕ್ಷರಗಳನ್ನು ಓದುವುದು. | ಪಠ್ಯ ಪುಸ್ತಕ | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಿರುವ ಗೃಹಪಾಠವನ್ನು ಪರಿಶೀಲಿಸುವುದು. | **ಕನ್ನಡ**<br>**ತಂಗಿಗೆ ನಾಮಕರಣ** | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.<br>* ಮಾರ್ಗದರ್ಶಿತ ಸರಳ ವಿವರಣಾತ್ಮಕ ವಾಕ್ಯ ಬರೆಯುವುದು. | | ಶಿಕ್ಷಕ | 1ನೇ ತರಗತಿಯಲ್ಲಿನ ಚಟುವಟಿಕೆಯನ್ನು ಎರಡನೇ ತರಗತಿಗೂ ಅನ್ವಯಿಸುತ್ತಾರೆ. |
| | 40 ನಿ | | | ಮಿಂಚು ಪಟ್ಟಿಗಳು | ಶಿಕ್ಷಕ | ಪುಟ 37ರ ಪ, ಯ, ಉ, ಡ, ಟ, ಚ ಹಂತಕ್ಕೆ ಸಂಬಂಧಿಸಿದಂತೆ ಇರುವ ಪದಗಳ ಮಿಂಚುಪಟ್ಟಿಗಳನ್ನು (ಹೆಚ್ಚುವರಿ ಪದಗಳನ್ನು ಬಳಸಬಹುದು) ಬಳಸಿ ಪದಗಳನ್ನು ಅಕ್ಷರಗಳನ್ನು ಗುರ್ತಿಸುತ್ತಾ ಓದಿಸುವುದು ಪುಟ–37 ಮತ್ತು 38ರ ಅಭ್ಯಾಸದ ಹಾಳೆಗಳನ್ನು ಸ್ವಂತ ಮೇಲ್ವಿಚಾರಣೆಯಲ್ಲಿ ಬರೆಸುವರು. | | | | ಹಿರೇಮಣಿ<br>ಶಿಕ್ಷಕ | **ಅಭ್ಯಾಸ ಚಟುವಟಿಕೆಯ ಹಂತ :**<br>ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳಿಂದ "ನಾಮಕರಣ"ದ ಆಟ ಆಡಿಸುವಂತೆ ತಿಳಿಸುವುದು.<br>ಹಿರೇಮಣಿಯ ನೇತೃತ್ವದಲ್ಲಿ "ನಾಮಕರಣ" ಆಟ ಆಡುವರು. |
| | 05 ನಿ | | | | ಶಿಕ್ಷಕ | ಪದಗಳ ಮಿಂಚುಪಟ್ಟಿಗಳನ್ನು ಕೊಟ್ಟು ಅವುಗಳನ್ನು ಮಕ್ಕಳಿಂದ ಓದಿಸಲು ಹಿರೇಮಣಿಗೆ ಸೂಚಿಸುವುರು. | | | | | ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ನಾಮಕರಣದ ಆಟದಲ್ಲಿ ಮಕ್ಕಳು ಹೇಗೆ ಆಡಿದರು. ಯಾರು ಯಾರು ? ಯಾವ ಯಾವ ಪಾತ್ರ ಮಾಡಿ ಆಟ ಆಡಿದರು. ಎಂಬುದನ್ನು ಪ್ರಶ್ನಿಸಿ ಉತ್ತರ ಪಡೆಯುವರು. ಮಕ್ಕಳು ಪೂರ್ಣರೂಪದಲ್ಲಿ ಉತ್ತರ ಕೊಡಲು ಮತ್ತು ಪರಸ್ಪರ ಮಾತನಾಡಲು ಅವಕಾಶ ನೀಡುವರು. |
| | 30 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2** | 15 ನಿ | **ಗಣಿತ**<br>**ಸಂಕಲನ** | * ಕೂಡುವ ಚಿಹ್ನೆ '+' ಮತ್ತು ಸಮಚಿಹ್ನೆ '=' ನ ಪರಿಚಯ ಮತ್ತು ಬಳಕೆ (ಅಭ್ಯಾಸ) | ಮಣಿಗಳು / ಗೋಲಿಗಳು, ಕಡ್ಡಿಗಳು ಸಂಖ್ಯೆಗಳ ಮಿಂಚುಪಟ್ಟಿ ಸಮಚಿಹ್ನೆಯ ಮಿಂಚುಪಟ್ಟಿ | ಶಿಕ್ಷಕ | ಮೊದಲಿಗೆ ಶಿಕ್ಷಕರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅವರನ್ನು ಚಿಕ್ಕ-ಚಿಕ್ಕ ಗುಂಪುಗಳನ್ನಾಗಿ ಮಾಡಿ, ಅವರಿಗೆ ಮಣಿ ಮತ್ತು ಗೋಲಿ ಮತ್ತು ಕಡ್ಡಿ ಹಾಗೂ ಮಿಂಚುಪಟ್ಟಿ ನೀಡಿ "ಒಂದು ಮಿಂಚುಪಟ್ಟಿ ಆಯ್ದು ಅದರಲ್ಲಿನ ಸಂಖ್ಯೆಗೆ ಸಮನಾದ ವಸ್ತುಗಳ 2 ಗುಂಪು ಮಾಡಿ ಅವುಗಳ ಮಧ್ಯ ಸಮ ಚಿಹ್ನೆಯ ಮಿಂಚುಪಟ್ಟಿ ಜೋಡಿಸುವಂತೆ ಸೂಚಿಸುವರು. | **ಗಣಿತ**<br>**ಸಂಕಲನ (ದಶಕ ಸಹಿತ ಮತ್ತು ದಶಕ ರಹಿತ)** | * ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಕಪ್ಪು ಹಲಗೆ | ಶಿಕ್ಷಕ | ಕಪ್ಪು ಹಲಗೆಯ ಮೇಲೆ ಮೂರು ಅಂಕಿಗಳ ಸಂಖ್ಯೆಗಳು ಸಂಕಲನದ ಲೆಕ್ಕಗಳನ್ನು (ದಶಕ ಸಹಿತ) ಹಾಕಿ ಹಿರೇಮಣಿಯ ನೇತೃತ್ವದಲ್ಲಿ ಆ ಲೆಕ್ಕಗಳನ್ನು ಬಿಡಿಸುವಂತೆ ಸೂಚನೆ ನೀಡುವರು.<br>ಉದಾ : 135<br>426<br>183<br>——— |
| | 20 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಮುಂದುವರಿಸುತ್ತಾ ವಸ್ತುಗಳ ಗುಂಪುಗಳ ಕೆಳಗೆ ಅವುಗಳಿಗೆ ಅನುಗುಣವಾದ ಸಂಖ್ಯೆಯ ಮಿಂಚುಪಟ್ಟಿ ಇಟ್ಟು ಅವುಗಳ ನಡುವೆ ಸಮಚಿಹ್ನೆ ಮಿಂಚುಪಟ್ಟಿ ಇಡುವುದು.<br>ಉದಾ :  = *** ***<br>6 = 6<br>ಶಿಕ್ಷಕರ ನಿರ್ವಹಣೆಯಲ್ಲಿ ಮಕ್ಕಳು ಗುಂಪುಗಳಲ್ಲಿ ಈ ಚಟುವಟಿಕೆಯಲ್ಲಿ ತೊಡಗುವರು. | | | ಕಪ್ಪುಹಲಗೆ<br>ಅಭ್ಯಾಸ ಪುಸ್ತಕ | ಹಿರೇಮಣಿ | ಮಕ್ಕಳು ಒಬ್ಬೊಬ್ಬರಾಗಿ ಕಪ್ಪು ಹಲಗೆಯ ಬಳಿ ಬಂದು ಒಂದೊಂದೇ ಲೆಕ್ಕಗಳನ್ನು ಬಿಡಿಸುವರು ಉಳಿದವರು ಈ ಲೆಕ್ಕಗಳನ್ನು ತಮ್ಮ ಪುಸ್ತಕದಲ್ಲಿ ಬರೆದುಕೊಂಡು ಬಿಡಿಸುವರು. |
| | 10 ನಿ | | | | ಶಿಕ್ಷಕ | ಎಲ್ಲಾ ಗುಂಪಿನ ಚಟುವಟಿಕೆ ಪರಿಶೀಲಿಸಿ, ತಪ್ಪುಗಳಿದ್ದರೆ ತಿದ್ದಿ, ಪುಟ – 59ರಲ್ಲಿ ಮೊದಲು ಚೌಕಟ್ಟಿನಲ್ಲಿ ಸಮಚಿಹ್ನೆ ಬರೆದು ನಂತರ ಅಭ್ಯಾಸ ಚಟುವಟಿಕೆ ಮಾಡಲು ಸೂಚನೆ ನೀಡುವರು. | | | | ಶಿಕ್ಷಕ | ಮಕ್ಕಳು ಬಿಡಿಸಿದ ಲೆಕ್ಕ ಪರಿಶೀಲಿಸುವರು, ತಪ್ಪುಗಳನ್ನು ತಿದ್ದುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಪುಟ – 59ರಲ್ಲಿನ ಚಟುವಟಿಕೆಯಲ್ಲಿ ತೊಡಗುವರು. | | | ತರಗತಿಯ ಸನ್ನಿವೇಶದಲ್ಲಿ ಲಭ್ಯ ವಸ್ತುಗಳು | ಶಿಕ್ಷಕ | ನಂತರ ಶಿಕ್ಷಕರು ತರಗತಿಯ ವಿವಿಧ ಸನ್ನಿವೇಶಗಳಲ್ಲಿ ಸಂಕಲನದ ಸಂದರ್ಭಗಳನ್ನು ವಿವರಿಸಿ ಮಕ್ಕಳಿಗೆ ನಿತ್ಯ ಜೀವನದಲ್ಲಿನ ಸಮಸ್ಯೆಗಳನ್ನು ಬಿಡಿಸುವ ವಿಧಾನವನ್ನು ವಿವರಿಸುವರು.<br>ಮಕ್ಕಳಿಂದಲೇ ಕೆಲವು ಸಮಸ್ಯೆಗಳನ್ನು ಬಿಡಿಸಲು ಹೇಳುವರು. ಅಗತ್ಯ ಮಾರ್ಗದರ್ಶನ ನೀಡುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸಿ, ತಪ್ಪುಗಳನ್ನು ತಿದ್ದುವರು. | | | | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ತಮ್ಮ ಚೀಲದಲ್ಲಿರುವ ಪಠ್ಯಪುಸ್ತಕಗಳ ಸಂಖ್ಯೆಗೆ ನೋಟ್ ಪುಸ್ತಕಗಳ ಸಂಖ್ಯೆಯನ್ನು ಸಂಕಲನ ಮಾಡಿ ಒಟ್ಟು ಪುಸ್ತಕಗಳ ಸಂಖ್ಯೆಯನ್ನು ತಿಳಿಸಲು ಹೇಳುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3** ಪ.ಅ **30** | 35 ನಿ | ಪರಿಸರ ಅಧ್ಯಯನ<br>ನಮ್ಮ ಆಹಾರ | ಆರೋಗ್ಯವನ್ನು ಕಾಪಾಡಲು ಆಹಾರದ ಅವಶ್ಯಕತೆ ಗ್ರಹಿಸುವರು. | ಪಠ್ಯ ಪುಸ್ತಕದ ಅಭ್ಯಾಸದಲ್ಲಿನ ಚಟುವಟಿಕೆಗಳು ಚಿತ್ರಪಟಗಳು | ಶಿಕ್ಷಕ | **ಅಭ್ಯಾಸ ಮತ್ತು ಪುನರ್ಬಲನ ಚಟುವಟಿಕೆ :**<br>* ಪುಟ 31ರ ಯಾವುದು 'ಸರಿ' ಯಾವುದು 'ತಪ್ಪು' ಚಟುವಟಿಕೆಯನ್ನು ಮಾಡಿಸುವುದು. ಪುಟ 30ರ ನೀವು ತಿನ್ನುವ ಆಹಾರ ಪದಾರ್ಥಕ್ಕೆ ' ✓ ' ಗುರುತು ಹಾಕು. ಚಟುವಟಿಕೆ ಮಾಡುವರು.<br>* ಪುಟ 32ರ "ಕೆಳಗೆ ಕೊಟ್ಟಿರುವ ಹಣ್ಣುಗಳಿಗೆ ಬಣ್ಣ ಹಾಕು" ಚಟುವಟಿಕೆ ಮಾಡಿಸುವುದು. | ಪರಿಸರ ಅಧ್ಯಯನ<br>ಆಹಾರ ಏಕೆ ಬೇಕು ? | * ಆಹಾರದಲ್ಲಿ ವೈವಿಧ್ಯತೆ * ಆಟಕ್ಕಾಗಿ ಕೆಲಸಕ್ಕಾಗಿ ಆಹಾರದ ಅವಶ್ಯಕತೆಯಿದೆ ಎಂದು ತಿಳಿಯುವರು. | ಪಠ್ಯ ಪುಸ್ತಕದ ಅಭ್ಯಾಸದ ಹಾಳೆಗಳು | | 2ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | | | | ಸ್ವಕಲಿಕೆ | 2ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕ | ನಾವು ತಿನ್ನುವ ಆಹಾರ ಹೇಗಿರಬೇಕು? ನಾವು ತಿನ್ನುವ ಆಹಾರದಲ್ಲಿ ಏನೇನು ಇರಬೇಕು ? ಎಂಬುದನ್ನು ಪ್ರಶ್ನಿಸಿ ಕೇಳುತ್ತಾ ತಿಳಿಸುವರು.<br>ಪುಟ 37ರ 'ಇವುಗಳ ಹೆಸರುಗಳನ್ನು ಬರೆ' ಹಾಗೂ ಪುಟ 30ರ "ತಿಳಿ-ಕಲಿ", 'ಅ' ಚಟುವಟಿಕೆಗಳನ್ನು ಮಾಡಿಸುವರು.<br>* ಮೇಲಿನ ಚಟುವಟಿಕೆಗಳನ್ನು ಕೇಳಿ ಹೇಳಿಸುತ್ತಾ ಅಭ್ಯಾಸದ ಹಾಳೆ ಭರ್ತಿ ಮಾಡಿಸುವರು. |
| | 05 ನಿ | | | | | ಎರಡೂ ತರಗತಿಗಳಿಗೆ ಅನ್ವಯವಾಗುವಂತೆ ಗೃಹಪಾಠ ನೀಡುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಚಟುವಟಿಕೆ | ಸಾಮರ್ಥ್ಯಗಳು | ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಚಟುವಟಿಕೆ | ಸಾಮರ್ಥ್ಯಗಳು | ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
